**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>**

ಸಿ.ಸಿ.ನಂಃ 242/2018 ಸಿ.ಡಬ್ಲ್ಯೂ –05 ಪಿ.ಡಬ್ಲ್ಯೂ -03

| | | |
|---|---|---|
| ಹೆಸರು | ಃ | ಶ್ರೀಶೈಲ |
| ತಂದೆಃ ಗಂಡ | ಃ | ರೇವಣಸಿದ್ದಪ್ಪಾ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಪಡಸವಳಗಿ |

ದಿನಾಂಕಃ22.08.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**<u>ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ</u>**

ಆರೋಪಿತರ ಪರಿಚಯ ಇರುತ್ತದೆ. ಚಾಸಾ 1 ನನ್ನ ಅತ್ತೆ, ಚಾಸಾ 2 ರಿಂದ 4 6 ರಿಂದ 9 ಪರಿಚಯ ಇರುತ್ತಾರೆ. ದಿಃ 18-11-2017 ರಂದು ಮೃತ ಶಂಕರ ಕಾಳಜೆಯವರು ತಮ್ಮ ವಾಹನದ ಮೇಲೆ ಪಡಸವಳಗಿಯಿಂದ ಉಮರ್ಗಾ ಕಡೆಗೆ ಹೋಗುತ್ತಿದ್ದಾಗ ಅಪಘಾತವಾಗಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲಿ ತಿರಿಕೊಂಡಿರುತ್ತಾರೆ. ನಂತರ ಮೃತ ದೇಹವನ್ನು ಆಳಂದ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದಿರುತ್ತಾರೆ. ಮರುದಿನ ಪಂಚನಾಮೆ ಮಾಡಿ ಮೃತ ದೇಹವನ್ನು ನೀಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**<u>ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.</u>**

ಮೃತ ಶಂಕರವರು ಅಪಘಾತ ನಡೆದ ದಿನ ಬೆಳ್ಳಿಗೆ 8.00 ಗಂಟೆಗೆ ಅವರ ದ್ವಿಚಕ್ರ ವಾಹನ ಕೆ ಎ 32/ಇಜಿ -2069 ಇದರ ಮೇಲೆ ಹೋಗಿರುತ್ತಾರೆ ಎಂದರೆ ಸರಿ. ನಂತರ 9.30 ಗಂಟೆಗೆ ಚಾಸಾ 8 ರವರು ನನಗೆ ಕರೆ ಮಾಡಿ ಅಪಘಾತದ ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ಮೃತ ಶಂಕರವರು ತಡೋಳಾ ಗ್ರಾಮದ ಸರ್ಕಾರಿ ಪ್ರೌಡ ಶಾಲೆಯ ಹತ್ತಿರ ತಮ್ಮ ಮೋಟಾರ ಸೈಕಲ ಮೇಲೆ ಹೋಗುತ್ತಿರುವಾಗ ಆರೋಪಿಯ ಅವರ ದ್ವಿಚಕ್ರ ವಾಹನದ ಸಂಖ್ಯೆ

ಎಮ ಎಚ್06/ಎಜೆ-4269 ಇದನ್ನು ಖಜೂರಿ ಬಾಡರ ಕಡೆಯಿಂದ ಅತೀ ವೇಗ ಮತ್ತು ನಿಷ್ಕಾಳಜಿತನದಿಂದ ನಡೆಸಿಕೊಂಡು ಬಂದು ಅಪಘಾತ ಪಡಿಸಿರುತ್ತಾರೆ ಎಂದರೆ ಸರಿ. ಸದರಿ ಅಪಘಾತದಿಂದ ಮೃತ ಶಂಕರವರಿಗೆ ತಲೆಗೆ, ಹಣೆಗೆ ಬಾರಿ ರಕ್ತಗಾಯ ಆಗಿತ್ತು ಎಂದರೆ ಸರಿ. ಸದರಿ ಅಪಘಾತವು ಬೆಳಿಗ್ಗೆ 9.00 ಗಂಟೆಗೆ ಆಗಿರುತ್ತದೆ ಅಂತಾ ತಿಳಿಸಿರುತ್ತಾರೆ ಎಂದರೆ ಸರಿ. ಅಪಘಾತದ ನಂತರ ವಾಹನ ಚಾಲಕನು ಓಡಿ ಹೋಗಿರುತ್ತಾನೆ ಅಂತಾ ತಿಳಿಸಿರುತ್ತಾರೆ ಎಂದರೆ ಸರಿ. ನಮಗೆ ಕೂಡಲೇ ಬರಬೇಕು ಅಂತಾ ಹೇಳಿದ ಕಾರಣ ನಾನು, ಚಾಸಾ 1, 6 ಮತ್ತು 7 ರವರು ಸೇರಿಕೊಂಡು ಘಟನಾ ಸ್ಥಳಕ್ಕೆ ಹೇಗಿರುತ್ತೇವೆ ಎಂದರೆ ಸರಿ. ಸ್ಥಳಕ್ಕೆ ಹೋಗಿ ನೋಡಿದಾಗ ಮೃತ ಶಂಕರವರಿಗೆ ಮೇಲೆ ಹೇಳಿದ ಗಾಯಗಳು ಆಗಿದ್ದವು ಎಂದರೆ ಸರಿ. ನಾನು ಈ ರೀತಿ ದಿನಾಂಕ 19-11-2017 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಅದೇ ರೀತಿ ದಿಃ 27-11-2017 ರಂದು ಪೋಲಿಸರು ನನ್ನನ್ನು ವೃತ್ತ ಕಚೇರಿಗೆ ಕರೆಯಿಸಿ ಆರೋಪಿಯನ್ನು ತೋರಿಸಿ ಸದರಿ ಅವನೇ ಅಪಘಾತ ಮಾಡಿರುತ್ತಾನೆ ಅಂತಾ ತಿಳಿಸಿರುತ್ತಾರೆ ಎಂದರೆ ಸರಿ. ಅವನ ಹೆಸರು ನಾರಾಯಣ ತಂದೆ ರಾಮು ವಾಘಮೋಡೆ ಸಾಃ ಕುನ್ನಹಳ್ಳಿ ತಾಃ ಉಮರ್ಗಾ ಅಂತಾ ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ಆರೋಪಿಯು ಈಗ ನ್ಯಾಯಾಲಯದಲ್ಲಿ ಇರುತ್ತಾನೆ. ದಿಃ 19-11-2017 ರಂದು ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸ್ಥಳದಿಂದ ಪೋಲಿಸರು ಕೆ.ಎ.32/ಇಜಿ-2069 ಮತ್ತು ಎಮ ಎಚ್ 06/ಎಜೆ-4269 ವನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು ಆರೋಪಿ ಪರ ಶ್ರೀಬಿ.ಜಿ.ಬಿ ವಕೀಲರಿಂದಃ</u>

ಮೃತ ಶಂಕರವರ ವಾಹನದ ಸಂಖ್ಯೆ ಕೆ.ಎ.32/ಇಜಿ-2069 ಇರುತ್ತದೆ. ಸದರಿ ವಾಹನಕ್ಕೆ ವಿಮೆ ಇತ್ತೊ ಇಲ್ಲವೋ ನನಗೆ ಗೊತ್ತಿಲ್ಲ. ಶಂಕರವರಿಗೆ ವಾಹನದ ಚಾಲನಾ ಪರವಾನಿಗೆ ಪತ್ರ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಎಮ ಎಚ್ 13/ಎಜೆ-4269, ಆರೋಪಿಯ ವಾಹನಕ್ಕೆ ವಿಮೆ ಇತ್ತು ಮತ್ತು ಆರೋಪಿಯ ಹತ್ತಿರ ವಾಹನ ಚಾಲನಾ ಪರವಾನಿಗೆ ಪತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ವಿಮೆ ಹಣಕ್ಕಾಗಿ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ನಾನು ಮತ್ತು ಚಾಸಾ 3 ರವರು ವಕೀಲರಿಗೆ ಪ್ರಕರಣವನ್ನು ನೀಡಿರುತ್ತೇವೆ. ನಾನು ವಕೀಲರಿಗೆ ಆರೋಪಿಯ ವಾಹನದ ಇನ್ಸುರೇನ್ಸ ಮತ್ತು

ವಾಹನ ಚಾಲನಾ ಪರವಾನಿಗೆ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಚಾಸಾ 1 ರವರ ಸಾಕ್ಷ್ಯ ಆಗಿರುತ್ತದೆ. ಘಟನಾ ಸ್ಥಳದಲ್ಲಿ ತಿರುವು ಇರುತ್ತದೆ ಎಂದರೆ ಸರಿ. ಮುಂದೆ ಶಾಲೆ ಇರುತ್ತದೆ ಎಂದರೆ ಸರಿ. ಶಾಲೆ ಇರುವುದರಿಂದ ರಸ್ತೆಯಲ್ಲಿ ಸ್ಪೀಡ್ ಬ್ರೇಕರಗಳು ಇರುತ್ತವೆ ಎಂದರೆ ಸರಿ. ಸ್ಪೀಡ ಬ್ರೇಕರಗಳು ಮತ್ತು ತಿರುವು ಇರುವುರಿಂದ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ಮೃತ ಶಂಕರವರು ಯಾವಾಗಲಾದರು ಒಮ್ಮೆ ಸಾರಾಯಿ ಕುಡಿಯುತ್ತಿದ್ದರು ಎಂದರೆ ಸರಿ. ಮೃತ ಶಂಕರವರು ಸಾರಾಯಿ ಕುಡಿದು ಆರೋಪಿಯ ವಾಹನಕ್ಕೆ ಅಪಘಾತ ಪಡಿಸಿರುತ್ತಾರೆ ಎಂದರೆ ಸರಿಯಲ್ಲ, ಆರೋಪಿಯ ವಾಹನಕ್ಕೆ ವಿಮೆ ಇರುವ ಕಾರಣ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ನನಗೆ ತಡೋಳ ಗ್ರಾಮದವರು ಯಾರು ಪರಿಚಯ ಇರುವುದಿಲ್ಲ, ತಡೋಳದ ಬಾಬುರಾವ ಸಹ ಪರಿಚಯ ಇರುವುದಿಲ್ಲ. ದಿಃ 17-11-2017 ರಂದು ನಾನು ಸಂಜೆ 6.00 ಗಂಟೆಗೆ ಪಂಚನಾಮೆಗೆ ಹೋಗಿದ್ದೇನೆ. ನಾನೊಬ್ಬನೇ ಹೋಗಿರುತ್ತೇನೆ. ಸ್ಥಳದಲ್ಲಿ ಒಬ್ಬರು ಪಿ.ಎಸ್.ಐ 3-4 ಜನ ಪೋಲಿಸರು ಇದ್ದರು. ಸದರಿ ಅವರನ್ನು ಹೊರತುಪಡಿಸಿದ ಬೇರೆ ಯಾರು ಇರಲಿಲ್ಲ. ನಾನು ಇದೇ ರೀತಿ ಪಂಚನಾಮೆಯನ್ನು ಬರೆಯಬೇಕು ಅಂತಾ ಪೋಲಿಸರಿಗೆ ಹೇಳಿರುವುದಿಲ್ಲ. ಚಕಬಂದಿ ನನಗೆ ಹೇಳಲು ಬರುವುದಿಲ್ಲ. ಆದರೆ ಸುತ್ತಮುತ್ತಲು ಹೋಲಗಳು ಇರುತ್ತವೆ ಅಂತಾ ನುಡಿಯುತ್ತಾರೆ. ನಾನು ಆರೋಪಿಯನ್ನು ನ್ಯಾಯಾಲಯಕ್ಕೆ ಬಂದಾಗ ನೋಡಿರುತ್ತೇನೆ ಎಂದರೆ ಸರಿ. ಘಟನೆ ನಡೆದಾಗ ಯಾವ ವಾಹನ ವೇಗದಲ್ಲಿ ಹೋಗುತ್ತಿತ್ತು ಯಾವ ವಾಹನ ನಿಧಾನವಾಗಿ ಹೋಗುತ್ತಿತ್ತು ಅಂತಾ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನಮ್ಮ ಊರಿನವರು ಕರೆ ಮಾಡಿ ವಿಷಯ ತಿಳಿಸಿರುತ್ತಾರೆ. ಅವರ ಹೆಸರು ಹಣಮಂತ,ದೂರವಾಣಿ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಆರೋಪಿಯ ವಾಹನಕ್ಕೆ ವಿಮೆ ಇರುವುದರಿಂದ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಗೆ 2-3 ಬಾರಿ ಹೋಗಿರುತ್ತೇನೆ. ನನ್ನ ಹೇಳಿಕೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮತ್ತು ಪಂಚನಾಮೆಯ ಮಾಡಿದ ಸ್ಥಳದಲ್ಲಿ ಪಡೆದುಕೊಂಡಿರುತ್ತಾರೆ. ಆರೋಪಿತರ ಪರಿಚಯ ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ನನ್ನ ಅತ್ತೆ,

ಚಾಸಾ 2 ರಿಂದ 4 6 ರಿಂದ 9 ಪರಿಚಯ ಇರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 18-11-2017 ರಂದು ಮೃತ ಶಂಕರ ಕಾಳಜೆಯವರು ತಮ್ಮ ವಾಹನದ ಮೇಲೆ ಪಡಸವಳಗಿಯಿಂದ ಉಮರ್ಗಾ ಕಡೆಗೆ ಹೋಗುತ್ತಿದ್ದಾಗ ಅಪಘಾತವಾಗಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲಿ ತಿರಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮೃತ ದೇಹವನ್ನು ಆಳಂದ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮರುದಿನ ಪಂಚನಾಮೆ ಮಾಡಿ ಮೃತ ದೇಹವನ್ನು ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇರುವುದಿಲ್ಲಾಃ</u>**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂ ದ